ಶ್ರೀ ಎ. ಮುನಿಯಪ್ಪ.—ಕೆರೆ ಕಾಮಗಾರಿಗಳನ್ನು ಮಂಜೂರು ಮಾಡುವುದಕ್ಕೆ ಮೊದಲು ಆಯಾ ತಾಲ್ಲೂಕಿನಲ್ಲಿ ಯಾರ ಸಲಹೆಯನ್ನು ಕೇಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಸಿಸ್ಟೆಂಟ್ ಇಂಜಿನಿಯರ ಸಲಹೆ.

ಶ್ರೀ ಎ. ಮುನಿಯಪ್ಪ.—ಡಿಸ್ಟ್ರೆಸ್ ರಿಲೀಫ್ ಕಮಿಟಿಯ ಸಲಹೆಯನ್ನು ಕೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಸಮಿತಿಯ ಸಲಹೆಯನ್ನೂ ಪಡೆಯುತ್ತಾರೆ.

ಶ್ರೀ ಎ. ಮುನಿಯಪ್ಪ.—ಅವರು ಹೇಳಿದುದನ್ನು ಬಿಟ್ಟು ಬೇರೆ ಕೆರೆಗಳ ಕೆಲಸಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎ. ಮುನಿಯಪ್ಪ.—1951-52 ಮತ್ತು 1952-53ನೆಯ ಸಾಲುಗಳಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ಮುನಿಯಪ್ಪ.—ಹೀಗೆ ಖರ್ಚುಮಾಡುವುದರಲ್ಲಿ ರೆಡ್‌ಕ್ರಾಸ್ ಧಾನ್ಯವೇನಾದರೂ ಸೇರಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಲಾರೆ.

ಶ್ರೀ ಎ. ಮುನಿಯಪ್ಪ.—ರಿಲೀಫ್ ಕಾಮಗಾರಿಗಳನ್ನು ನಾಮಿನಲ್ ರೋಲ್ಸ್‌ಮೇಲೆ ಮಾಡುತ್ತಾರೋ ಅಥವಾ ಕಂಟ್ರಾಕ್ಟ್‌ಕೊಟ್ಟು ಮಾಡಿಸುತ್ತಾರೊ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ನಾಮಿನಲ್ ರೋಲ್ಸ್‌ಮೇಲೆ ಮಾಡುತ್ತಾರೆ.

ಶ್ರೀ ಎ. ಮುನಿಯಪ್ಪ.—ಕೆಲವರ ಕೈಲಿ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡು ಬೇರೆಯವರು ಹಣ ಪಡೆದಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥದನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ.—ಆ ರೆಕ್ಕಗಳನ್ನು ಆಡಿಟ್ ಮಾಡಿದ್ದಾರೆಯೆ ? ಈಗ ಅದರಲ್ಲಿ ದೋಷದೋಷಗಳು ಕಂಡು ಬಂದಿವೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದಿದ್ದರೆ ವರದಿ ಮಾಡುತ್ತಾರೆ, ಅದರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಮುನಿಯಪ್ಪ.—ಹಿಂದೆ ಮಾಡಿದ ಕಾಮಗಾರಿಗಳಿಗೆ ಇನ್ನೂ ಹಣ ಕೊಡದೇಯಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಜಿಲ್ಲೆಯಲ್ಲ ಬೇಕಾದಷ್ಟು ಹಣಕೊಟ್ಟಿದ್ದಾರೆ. ಹಿಂದೆ ಪ್ರಾರಂಭಿಸಿದ ಕೆಲಸಗಳನ್ನು ನಡೆಸುವುದಕ್ಕೆ ಸಾಕಷ್ಟು ಹಣವಿದೆ, ಮುಂದೆ ತೆಗೆದುಕೊಳ್ಳಬೇಕಾದ ಕೆಲಸಗಳಿಗೂ ಹಣವಿದೆ.

ಶ್ರೀ ಎ. ಮುನಿಯಪ್ಪ.—ಆದರೂ ಹೀಗೆ ಹಣ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಹಣಕೊಟ್ಟಿದ್ದಾರೆ.

ಶ್ರೀ ಎ. ಮುನಿಯಪ್ಪ.—ಕೆಲವು ಕಾಮಗಾರಿಗಳಿಗೆ ಕೊಟ್ಟಿಲ್ಲ.

ಅಧ್ಯಕ್ಷರು.—ಕೊಡುತ್ತಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹೋದಸಾರಿ ಹಣ ಕೊಡುತ್ತೇವೆಂದು, ಭರವಸೆಕೊಟ್ಟಿದ್ದರೂ ಇನ್ನೂ ಕೊಟ್ಟಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹೋದಸಾರಿ ಈ ಪ್ರಶ್ನೆಯನ್ನು ಎತ್ತಿದಾಗ ಆ ಅಧಿಕಾರಿಗಳಿಗೆ ನೋಟಿಸ್ ಕೊಟ್ಟಿದೆ ಎಂದು ಹೇಳಿದರೂ ಪುನಃ ನೋಟಿಸ್ ಬಂದಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

(ಉತ್ತರವಿಲ್ಲ)

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಪೀಸ್‌ವರ್ಕ್ ಮೇರೆ ಎಷ್ಟು ಸಾವಿರ ರೂಪಾಯಿವರೆಗೆ ಕೊಡಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಬೇಕಾದರೂ ಕೊಡಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಪೀಸ್‌ವರ್ಕ್ ಪದ್ಧತಿಯಲ್ಲ ಎಷ್ಟು ಕೊಟ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಡಿಸ್ಟ್ರೆಸ್ ರಿಲೀಫ್ ಕೆಲಸಗಳನ್ನು ಪೀಸ್‌ವರ್ಕ್ ಮೇರೆ ಕೊಡುತ್ತಾರೆ. ಲಕ್ಕವಳ್ಳಿ, ತುಂಗಾ ಮುಂತಾದ ಕಡೆ ಸಂದರ್ಭಾನುಸಾರ ಮಾಡುತ್ತಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಟೆಂಡರುಗಳನ್ನು ಕರೆದುಕೊಟ್ಟರೆ ಸರ್ಕಾರಕ್ಕೆ ಹಣ ಉಳಿಯುತ್ತದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲ ಹಾಗೆ, ಮತ್ತೆ ಕೆಲವು ಸಂದರ್ಭಗಳಲ್ಲ ಹೀಗೆ ಇರುತ್ತದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಯಾವ ಸಂದರ್ಭಗಳಲ್ಲ ಟೆಂಡರ್ ಕರೆದು ಕಂಟ್ರಾಕ್ಟು ಕೊಡಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸಂದರ್ಭಾನುಸಾರ ಇರುತ್ತದೆ. ಕೆಲವು ಕಡೆ ಕಂಟ್ರಾಕ್ಟರುಗಳು ಸಿಕ್ಕುತ್ತಿಲ್ಲ, ಟೆಂಡರ್ ಕರೆದರೂ ಸಿಕ್ಕುವುದಿಲ್ಲ, ಅಲ್ಲದೆ ಅದರಿಂದ ರಿಲೀಫ್ ಕಾಮಗಾರಿಗಳನ್ನು ನಡೆಸಲು ಕಾಲಹರಣವಾಗಬಹುದು.

Completing the road from Joldhal up to Channagiri-Sulekere Road.

Q.—302. Sri L. SIDDAPPA (Channagiri).—

Will the Government be pleased to state :—

(*a*) whether the Government are aware that the defunct Tunnel Division laid out a road commencing from Joldhal *via* Ganadakatte-Sarathi-Mavinakatte — Hiremadhal — Birnahally — Hiremalali-Galihalli and Asaporahally Villages to Nallur to join Channagiri-Sulekere Road ;

(*b*) the amount spent on the above work so far ;

(*c*) whether they are aware that for want of execution of the balance of works, the road is not fit for vehicular traffic ;

(*d*) whether they intend completing the balance of work next year?

A.—Sri KADIDAL MANJAPPA (Minister for Revenue and Public Works).—

(*a*) Yes.
(*b*) Not readily available.
(*c*) Yes.
(*d*) Will be considered.

ಶ್ರೀ ಎಲ್. ಸಿದ್ದಪ್ಪ.—ಟನಲ್ ಡಿವಿಜನ್‌ನ್ನು ಪಡಾ ಮಾಡಿ ಮೂರು ವರ್ಷಗಳ ಮೇಲಾಯಿತಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಲ್. ಸಿದ್ದಪ್ಪ.—ಆದರೂ ಅವರು ಪ್ರಾರಂಭ ಮಾಡಿದ ಕೆಲಸವನ್ನು ಮುಂದುವರಿಸುವುದಕ್ಕೆ ಏಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—೫೩,೬೦೦ ರೂಪಾಯಿಗೆ ಅಂದಾಜು ಮಂಜೂರಾಗಿದೆ, ಅದನ್ನು ಮುಂದುವರಿಸುವುದಕ್ಕೆ, ಕಲ್ವರ್ಟ್‌ಗಳನ್ನು ಕಟ್ಟುವುದಕ್ಕೆ, ಹಣವಿಲ್ಲದೆ ತೆಗೆದುಕೊಂಡಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಹಣವಿಲ್ಲವೆಂದು ಮೂರು ವರ್ಷಕಾಲ ನಿಲ್ಲಿಸಿದರೆ, ಇದುವರೆಗೆ ಅದಕ್ಕೆ ಖರ್ಚು ಮಾಡಿರುವುದು ನಿಷ್ಪ್ರಯೋಜನವಾಗುವುದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ನಿಜ.

ಶ್ರೀ ಎಲ್. ಸಿದ್ದಪ್ಪ.—ನೂಮಾರು ೨೫ ಸಾವಿರ ರೂಪಾಯಿ ಆಗುತ್ತದೆ, ಈ ವರ್ಷವಾದರೂ ಪೂರ್ತಿ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡುತ್ತೇವೆ.

12-30 P.M.

Requests for fresh irrigation works from Channagiri Taluk.

Q.—303. Sri L. SIDDAPPA (Channagiri).—

Will the Government be pleased to state :—

(*a*) the fresh irrigation works for which requests have been made by the public in Channagiri Taluk ;

(*b*) the stage of each of them ?

A.—Sri KADIDAL MANJAPPA (Minister for Revenue and Public Works).—

(*a*) Fresh Irrigation works :—

1 Restoration of Mohiudinpura tank (Bada Sab tank)
2 Restoration of Nallakudure Addaghatta tank
3 Feeder channel to Hebbalgere tank
4 Improvement of feeder channel to Nagathikere
5 Construction of a tank across Mavinahole
6 Restoration of Moravany
7 Construction of anicut across Urehalla.

(*b*)—

1 Estimate for Rs. 64,500 got up. A notification has been issued in the Gazette regarding irrigation enquiry and mutchalika, etc. The estimate will be submitted to Government for sanction after the enquiry is conducted.
2 Under correspondence with the Deputy Commissioner regarding acquisition and handing over possession of land for the feeder channel.
3 Desilting done; estimate for restoration got up and action is being taken.
4 An estimate for Rs. 26,000 has been got up and notification issued in the Gazette regarding irrigation enquiry.
5 Government have ordered this project for being deferred for the present.
6 Regarding Moravanji tank, as continued efforts have proved ineffective to prevent its leakage in the tank it is proposed to abandon the tank and construct a major tank in the valley lower down to irrigate about 300 acres. This is under investigation and a report to Government will be made.
7 Under scrutiny in Division Office after being recast. The amount of the estimate is Rs. one lakh.

ಶ್ರೀ ಎಲ್. ಸಿದ್ದಪ್ಪ.—ತಾವು ಈ ಐಟಂ ನಂಬರ್ (7) ರಲ್ಲಿ ತಿಳಿಸಿರುವುದು ಇನ್‌ವೆಸ್ಟಿಗೇಟ್ ಆಗಿ ಎಷ್ಟು ವರ್ಷಗಳಾಯಿತು ?

Sri KADIDAL MANJAPPA.—I am sorry I cannot give the period during which it has been investigated.

Sri L. SIDDAPPA.—Are the Government aware that it feeds about four tanks ?

Sri KADIDAL MANJAPPA.—May be.

Sri L. SIDDAPPA.—Why is this work being neglected for such a long time ?